# ಮೈಸೂರು ವಿಶ್ವವಿದ್ಯಾನಿಲಯ

## ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ

**ಮಾನಸಗಂಗೋತ್ರಿ, ಮೈಸೂರು – 570006**

(4.0 ಸ್ಕೇಲ್‌ನ 3.47 ಸಿಜಿಪಿಎಯೊಂದಿಗೆ ನ್ಯಾಕ್‌ನಿಂದ ಮರು ಮಾನ್ಯತೆ ಪಡೆದಿದೆ)

ಎನ್‌ಐಆರ್‌ಎಫ್–2020 ವಿಶ್ವವಿದ್ಯಾನಿಲಯ ವಿಭಾಗದಲ್ಲಿ 27ನೇ ಸ್ಥಾನ ಮತ್ತು ಒಟ್ಟಾರೆ ವಿಭಾಗದಲ್ಲಿ 47ನೇ ಸ್ಥಾನ)

**ದೂರವಾಣಿ: 0821–2419318/386/429** **e-mail : dswuommgm@gmail.com**

**ಸಂಖ್ಯೆ: ವಿಕ್ಷೇಪಾ.10/25/1134/2020–2021** **ದಿನಾಂಕ: 16–02–2021**

**ಅಡಕ :**

1. ನಮೂನೆ – 1
2. ಪ್ರಮಾಣ ಪತ್ರ
3. ಹಣ ಸಂದಾಯ ರಶೀದಿ

## ಸುತ್ತೋಲೆ

2020–2021ನೇ ಶೈಕ್ಷಣಿಕ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿಶೇಷಚೇತನ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದ ವತಿಯಿಂದ ನೀಡಲಾಗುವ ಧನಸಹಾಯಕ್ಕೆ ವಿಶ್ವವಿದ್ಯಾನಿಲಯದ ಅಧೀನ ಕಾಲೇಜುಗಳು ಮತ್ತು ಸಂಯೋಜಿತ ಕಾಲೇಜುಗಳು ಹಾಗೂ ಸ್ನಾತಕೋತ್ತರ ಅಧ್ಯಯನ ವಿಭಾಗ/ಕೇಂದ್ರಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ವಿಶೇಷಚೇತನ ವಿದ್ಯಾರ್ಥಿಗಳಿಂದ ನಿಗದಿತ ನಮೂನೆ–1ರಲ್ಲಿ ಧನಸಹಾಯಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಭರ್ತಿ ಮಾಡಿದ ಅರ್ಜಿಗಳನ್ನು ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು, ಇಲ್ಲಿಗೆ **ದಿನಾಂಕ : 19–03–2021** ರೊಳಗಾಗಿ ಸಲ್ಲಿಸಲು ತಿಳಿಸಲಾಗಿದೆ. **ನಂತರ ಬಂದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ** (ಹೆಚ್ಚಿನ ವಿದ್ಯಾರ್ಥಿಗಳಿದ್ದಲ್ಲಿ ಅರ್ಜಿಯನ್ನು ಜೆರಾಕ್ಸ್ ಮಾಡಿಸಿಕೊಳ್ಳುವುದು).

**ನಿಬಂಧನೆಗಳು:**

1. ಅಂಗವಿಕಲತೆಯ ಬಗ್ಗೆ **ಜಿಲ್ಲಾ ವೈದ್ಯಾಧಿಕಾರಿಗಳಿಂದ ಪಡೆದ ಇತ್ತೀಚಿನ ಪ್ರಮಾಣ ಪತ್ರವನ್ನು** ಲಗತ್ತಿಸಬೇಕು.
2. ಅಂಗವಿಕಲತೆಯು ಎದ್ದು ಕಾಣುವಂತಹ **ಇತ್ತೀಚಿನ ಭಾವಚಿತ್ರವನ್ನು (ಮೂಲ ಭಾವಚಿತ್ರ)** ಲಗತ್ತಿಸಬೇಕು.
3. ಅರ್ಜಿಯ ಜೊತೆಗೆ ಲಗತ್ತಿಸಿರುವ **ಹಣ ಸಂದಾಯ ರಶೀದಿಗೆ ವಿದ್ಯಾರ್ಥಿಯು ಸಹಿ ಮಾಡಿ, ಪ್ರಾಂಶುಪಾಲರು/ಅಧ್ಯಕ್ಷರಿಂದ ದೃಢೀಕರಿಸಿ ಕಳುಹಿಸಬೇಕು. ಮೊತ್ತವನ್ನು ರಶೀದಿಯಲ್ಲಿ ಯಾವುದೇ ಕಾರಣಕ್ಕೂ ನಮೂದಿಸಬಾರದು.** ಒಂದು ವೇಳೆ ಧನಸಹಾಯ ಮಂಜೂರಾಗದಿದ್ದಲ್ಲಿ ಈ ರಶೀದಿಯನ್ನು ಹಿಂದಿರುಗಿಸಲಾಗುವುದು.
4. **ಶೇ.40%** ಕ್ಕಿಂತ ಕಡಿಮೆ ಅಂಗವಿಕಲತೆಯಿರುವವರು ಅರ್ಜಿಯನ್ನು ಸಲ್ಲಿಸಬಾರದು.
5. ವಿದ್ಯಾರ್ಥಿಗಳು ಘನ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ **ಕಾಲೇಜು/ವಿಭಾಗಗಳಲ್ಲಿ ಕಡ್ಡಾಯವಾಗಿ ಶೇಕಡ 75% ಕ್ಕೂ ಹೆಚ್ಚಿನ ಹಾಜರಾತಿಯನ್ನು** ಹೊಂದಿರಬೇಕಾಗಿರುತ್ತದೆ.
6. ವಿದ್ಯಾರ್ಥಿಗಳ ಖಾತೆಗೆ ಧನಸಹಾಯದ ಮೊತ್ತವನ್ನು ಸಂದಾಯ ಮಾಡುವುದರಿಂದ ಸದರಿ ವಿದ್ಯಾರ್ಥಿಯು ಖಾತೆಯನ್ನು ಹೊಂದಿರುವ ಬ್ಯಾಂಕಿನ ಹೆಸರು, ಉಳಿತಾಯ ಖಾತೆ ಸಂಖ್ಯೆ ಹಾಗು IFSC Code ಸ್ಪಷ್ಟವಾಗಿ ಕಾಣುವಂತಹ ಬ್ಯಾಂಕ್ ಪಾಸ್‌ಬುಕ್ ಜೆರಾಕ್ಸ್ ಪ್ರತಿ ಲಗತ್ತಿಸಬೇಕು.
7. ಸೂಚಿಸಿದ ದಿನಾಂಕ ಹಾಗೂ ನಿಗದಿತ ವೇಳೆಯಲ್ಲಿ ವೈದ್ಯಕೀಯ ತಪಾಸಣೆಗೆ ಹಾಜರಾಗಬೇಕು ಹಾಜರಾಗದಿದ್ದ ಪಕ್ಷದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು.

8. ಧನಸಹಾಯಕ್ಕೆ ಕೋರಿ ಅರ್ಜಿ ಸಲ್ಲಿಸುವ ತಮ್ಮ ಕಾಲೇಜಿನ ಒಟ್ಟು ವಿದ್ಯಾರ್ಥಿಗಳ ಮಾಹಿತಿಯನ್ನು (ವಿದ್ಯಾರ್ಥಿಯ ಹೆಸರು, ತರಗತಿ, ವಿಭಾಗ, ಕಾಲೇಜಿನ ಹೆಸರು, ಬ್ಯಾಂಕ್ ಖಾತೆ ಸಂಖ್ಯೆ ಹಾಗೂ IFSC Code) ಅನ್ನು **Excel Format** ನಲ್ಲಿ ಇಂಗ್ಲೀಷ್‌ನಲ್ಲಿ ಟೈಪ್ ಮಾಡಿ ಸಿ.ಡಿ.ಯಲ್ಲಿ ಅಥವಾ ಇ-ಮೇಲ್‌ಗೆ ಕಳುಹಿಸುವುದು. (E-mail- dswuommgm@gmail.com )

16/2/2021

(ಡಾ.ಎಸ್.ಟಿ. ರಾಮಚಂದ್ರ)
ನಿರ್ದೇಶಕ

16/2/21

ಗೆ,

ವಿಶ್ವವಿದ್ಯಾನಿಲಯದ ಎಲ್ಲಾ ಅಧೀನ ಮತ್ತು ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರು ಹಾಗೂ ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ/ಕೇಂದ್ರಗಳ ಮುಖ್ಯಸ್ಥರು, ಮೈಸೂರು, ಮಂಡ್ಯ, ಹಾಸನ ಮತ್ತು ಚಾಮರಾಜನಗರ.

ಪ್ರತಿ :

1. ಮಾನ್ಯ ಕುಲಪತಿಗಳ/ಕುಲಸಚಿವರ/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
2. ಕಚೇರಿ ಪ್ರತಿ/ ರೆಕ್ಷಾ ಕಡತಕ್ಕೆ

ಮೈಸೂರು ವಿಶ್ವವಿದ್ಯಾನಿಲಯ
(4.0 ಸ್ಕೇಲ್‌ನ 3.47 ಸಿಜಿಪಿಎಯೊಂದಿಗೆ ನ್ಯಾಕ್‌ನಿಂದ ಮರು ಮಾನ್ಯತೆ ಪಡೆದಿದೆ)
ಎನ್‌ಐಆರ್‌ಎಫ್-2020 ವಿಶ್ವವಿದ್ಯಾನಿಲಯ ವಿಭಾಗದಲ್ಲಿ 27ನೇ ಸ್ಥಾನ ಮತ್ತು ಒಟ್ಟಾರೆ ವಿಭಾಗದಲ್ಲಿ 47ನೇ ಸ್ಥಾನ)

**ವಿಶ್ವವಿದ್ಯಾನಿಲಯ ಕಾರ್ಯಸೌಧ, ಕ್ರಾಫರ್ಡ್ ಭವನ, ಮೈಸೂರು – 570 005**

**website : www.uni-mysore.ac.in**

**ವಿಷಯ :** ವಿಶೇಷಚೇತನ ವಿದ್ಯಾರ್ಥಿಗಳಿಗೆ ಧನ ಸಹಾಯ ಹಂಚಿಕೆ ಮಾಡುವ ಬಗ್ಗೆ.

**ಉಲ್ಲೇಖ :** 1. ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ : ವಿ.ಕ್ಷೇ.ಪಾ.10/25/1134/2020-21 ದಿನಾಂಕ : 16-02-2021

*=*=*

**ಪ್ರಸ್ತಾವನೆ :** ವಿಶ್ವವಿದ್ಯಾನಿಲಯದ ಅಧೀನ ಕಾಲೇಜುಗಳು ಸಂಯೋಜಿತ ಕಾಲೇಜುಗಳು ಹಾಗೂ ಸ್ನಾತಕೋತ್ತರ ಅಧ್ಯಯನ ವಿಭಾಗ / ಮಂಡ್ಯ, ಹಾಸನ ಮತ್ತು ಚಾಮರಾಜನಗರ ಕೇಂದ್ರಗಳಲ್ಲಿ 2020-21ನೇ ಶೈಕ್ಷಣಿಕ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿದ್ದ ವಿಶೇಷಚೇತನ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದ ವತಿಯಿಂದ ನೀಡಲಾಗುವ ಧನ ಸಹಾಯವನ್ನು ಕೋರಿ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳಿಗೆ ಪ್ರತಿ ಶೈಕ್ಷಣಿಕ ಸಾಲಿನಲ್ಲಿಯೂ ಸಂಬಂಧಿಸಿದ ಶೀರ್ಷಿಕೆಯಡಿ ನಿಗಧಿಪಡಿಸಲಾಗುವ ಮೊತ್ತವನ್ನು ಸಮಾನವಾಗಿ ಹಂಚಿಕೆ ಮಾಡಲು 2020-21ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಟ್ಟಿರುವ ರೂ. 2,50,000-00ಗಳಿಗೆ ಒಟ್ಟು 136 ವಿಶೇಷಚೇತನ ವಿದ್ಯಾರ್ಥಿಗಳು ಉಲ್ಲೇಖ (1)ರ ಸುತ್ತೋಲೆಯನ್ವಯ ಧನಸಹಾಯಕ್ಕಾಗಿ ಅರ್ಜಿ ಸಲ್ಲಿಸಿರುತ್ತಾರೆ. ಅದರಲ್ಲಿ 01 ವಿಶೇಷ ಚೇತನ ವಿದ್ಯಾರ್ಥಿಯು ಸಲ್ಲಿಸಿದ್ದ ಅರ್ಜಿಯು ಅಪೂರ್ಣಗೊಂಡಿರುತ್ತದೆ, ಅದನ್ನು ಹೊರತುಪಡಿಸಿ, ಉಳಿದ 135 ವಿಶೇಷ ಚೇತನ ವಿದ್ಯಾರ್ಥಿಗಳಿಗೆ ತಲಾ ಒಬ್ಬರಿಗೆ ರೂ. 1,850/-ರಂತೆ 135 ವಿಶೇಷಚೇತನ ವಿದ್ಯಾರ್ಥಿಗಳಿಗೆ ರೂ. 2,49,750/-ಗಳನ್ನು ಹಂಚಿಕೆ ಮಾಡಿ ಉಳಿದ ರೂ. 250/-ಗಳನ್ನು ವಿಶ್ವವಿದ್ಯಾನಿಲಯದ ಜಿ.ಆರ್.ಎ. ಖಾತೆಗೆ ಜಮಾ ಮಾಡುವ ಪ್ರಸ್ತಾವನೆಯನ್ನು ಮಾನ್ಯ ಕುಲಪತಿಗಳು ಕಡತ ಸಂಖ್ಯೆ : ವಿ.ಕ್ಷೇ.ಪಾ.10/25/2020-21ರ ಪುಟ ಸಂಖ್ಯೆ 04ರಲ್ಲಿ ಒಪ್ಪಿರುವುದರಿಂದ ಈ ಆದೇಶ.

**<u>ವಿ.ವಿ. ಆದೇಶ ಸಂಖ್ಯೆ : ವಿ.ಕ್ಷೇ.ಪಾ.10/25/ 74 /2020-21 ದಿನಾಂಕ : 27-4-2021</u>**

ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ 2020-21ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾನಿಲಯದ ಅಧೀನ ಕಾಲೇಜುಗಳು, ಸಂಯೋಜಿತ ಕಾಲೇಜುಗಳು ಹಾಗೂ ಸ್ನಾತಕೋತ್ತರ ಅಧ್ಯಯನ ವಿಭಾಗವಾದ ಮಂಡ್ಯ, ಹಾಸನ ಮತ್ತು ಚಾಮರಾಜನಗರ ಕೇಂದ್ರಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿಶೇಷಚೇತನ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದ ವತಿಯಿಂದ ಮೀಸಲಿರಿಸಿರುವ ಒಟ್ಟು ರೂ. 2,50,000-00 ಮೊತ್ತದಲ್ಲಿ, ಧನ ಸಹಾಯವನ್ನು ಕೋರಿ ಅರ್ಜಿ ಸಲ್ಲಿಸಿದ್ದ ಅರ್ಹ 135 ವಿದ್ಯಾರ್ಥಿಗಳಲ್ಲಿ ಒಬ್ಬ ವಿದ್ಯಾರ್ಥಿಗೆ ರೂ. 1,850/- ರಂತೆ 135 ವಿಶೇಷಚೇತನ ವಿದ್ಯಾರ್ಥಿಗಳಿಗೆ ರೂ. 2,49,750/-ಗಳನ್ನು ವಿದ್ಯಾರ್ಥಿಗಳ ಖಾತೆಗೆ ನೇರವಾಗಿ ಹಂಚಿಕೆ ಮಾಡಲು ಹಾಗೂ ಉಳಿದ ರೂ. 250/-ಗಳನ್ನು ವಿಶ್ವವಿದ್ಯಾನಿಲಯದ ಜಿ.ಆರ್.ಎ. ಖಾತೆಗೆ ಜಮಾ ಮಾಡಲು ಅನುಮತಿ ನೀಡಲಾಗಿದೆ.

ಸದರಿ ವೆಚ್ಚವನ್ನು "2020-21ನೇ ಸಾಲಿನ ಆಯವ್ಯಯದಲ್ಲಿನ ಅಂಗವಿಕಲ ವಿದ್ಯಾರ್ಥಿಗಳಿಗೆ ನೆರವು-165' ಶೀರ್ಷಿಕೆಯಿಂದ ಮುಂಗಡವಾಗಿ ಪಡೆದ ಒಟ್ಟು ರೂ. 2,50,000-00ರಲ್ಲಿ ಭರಿಸಲು ಸಹ ಆದೇಶಿಸಲಾಗಿದೆ.

ಆದೇಶದ ಮೇರೆಗೆ

ಕುಲಸಚಿವ

ಇವರಿಗೆ

1. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರ
2. ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ, ಪ್ರಾಂತೀಯ (ವಿಭಾಗೀಯ) ಕಚೇರಿ, ಮೈಸೂರು ವಿಭಾಗ, ಮೈಸೂರು
3. ಮಾನ್ಯ ಕುಲಪತಿಗಳ/ಕುಲಸಚಿವರ ಆಪ್ತಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
4. ಕಚೇರಿ ಪ್ರತಿ

DSW-10-Hml